# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 2001/10/31/2017(SB–3)**

**ದಿನಾಂಕ: 10–02–2021**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀಮತಿ ಪ್ರೇಮ ಕೋಂ ಶಿವರಾಮ್
ಕೆ–72, (ನಂದಿ ಡಿಪಾರ್ಟ್‌ಮೆಂಟಲ್ ಮಾರ್ಕೆಟ್)
4ನೇ ಮೈನ್, 10ನೇ ಕ್ರಾಸು,
ಲಕ್ಷ್ಮೀನಾರಯಾಣಪುರ, ನಿಯರ್ ಲಾಸ್ಟ್ ಬಸ್‌ಸ್ಟಾಪ್,
ಬೆಂಗಳೂರು – 560 021

## ಆದೇಶ

ದೂರುದಾರರಾದ ಶ್ರೀಮತಿ ಪ್ರೇಮ ರವರು ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ, ತನ್ನ ಗಂಡ ಶಿವರಾಮ್ ರವರು ಬೆಂಗಳೂರಿನ ಲಕ್ಷ್ಮೀನಾರಾಯಾಣಪುರದಲ್ಲಿ ನಂದಿ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್ ಎಂಬ ಹೆಸರಿನಲ್ಲಿ ಪ್ರಾವಿಷನ್ ಸ್ಟೋರ್ಸ್ ನಡೆಸುತ್ತಿದ್ದು, ಅಂಗಡಿಯಲ್ಲಿ ಗ್ರಾಹಕರು ದಿನಸಿಯನ್ನು ತೆಗೆದುಕೊಂಡು ಹೋಗಿ, ಕೊಡುತ್ತಿದ್ದ ಹಣವನ್ನ ವಸೂಲಿ ಮಾಡಲು ದಿನಾಂಕ 03–04–2017 ರಂದು ಸಂಜೆ ಹೋದವರು ಮನೆಗೆ ಬರಲಿಲ್ಲವಾದ್ದರಿಂದ, ದೂರುದಾರರಾದ ಪ್ರೇಮರವರು ತನ್ನ ಗಂಡನ ಅಂಗಡಿಯಲ್ಲಿ ಕೆಲಸ ಮಾಡುವ ಲಲಿತ್ ಎಂಬತಾನನ್ನು ವಿಚಾರ ಮಾಡಲಾಗಿ ಆತನು ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯ ಪೊಲೀಸರು ಶಿವರಾಮ್ ರವರನ್ನು ಠಾಣೆಗೆ ಕರೆದುಕೊಂಡು ಹೋಗಿ ಇಲ್ಲ ಸಲ್ಲದ ತೊಂದರೆ ಕೊಡುತ್ತಿದ್ದು ಹಾಗೂ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಖೈದಿಗಳೊಂದಿಗೆ ತನ್ನ ಪತಿಯನ್ನು ಸೇರಿಸಿ, ಯಾವುದೇ ಆಧಾರ ಹಾಗೂ ದೂರುಗಳಿಲ್ಲದೆ, ಅಕ್ರಮ ಬಂಧನದಲ್ಲಿಟ್ಟು ಹಿಂಸೆ ನೀಡುತ್ತಿರುವ ಬಗ್ಗೆ ತಿಳಿಸಿದ್ದು, ತನ್ನ ಗಂಡನನ್ನು ಅಕ್ರಮ ಬಂಧನದಿಂದ ಬಿಡಿಸಿ ತಮ್ಮ ಸಂಸಾರವನ್ನು ಕಾಪಾಡಬೇಕು ಎಂದು ಕೋರಿರುತ್ತಾರೆ.

ಈ ದೂರಿನ ಪ್ರತಿಯನ್ನು ಪೊಲೀಸ್ ಮಹಾ ನಿರ್ದೇಶಕರು, ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರಿಗೆ ಸೂಕ್ತ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಕಳುಹಿಸಿದ್ದು, ಅದರಂತೆ ಸದರಿಯವರು ತಮ್ಮ ವರದಿಯೊಂದಿಗೆ ಆಯೋಗದ ಡಿವೈ.ಎಸ್.ಪಿ. ರವರ ವರದಿ ಹಾಗೂ

ಅದರೊಂದಿಗಿರುವ ಅನುಬಂಧಗಳನ್ನು ಸಲ್ಲಿಸಿರುತ್ತಾರೆ. ಸದರಿಯವರ ವರದಿಯ ಸಂಬಂಧಿತ ಸಾರ ಈ ಕೆಳಕಂಡಂತೆ ಇದೆ:

> "ಅರ್ಜಿದಾರರ ಆಪಾದನೆಗೆ ಸಂಬಂಧಪಟ್ಟಂತೆ ವಿಚಾರಣೆಕಾಲದಲ್ಲಿ ಪಡೆದಿರುವ ಸಾಕ್ಷಿದಾರರ ಹೇಳಿಕೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ ಅರ್ಜಿದಾರರ ಗಂಡ ಶ್ರೀ ಖಿವರಾಮ್ ರವರನ್ನು ಆರ್.ಎಂ.ಸಿ.ಯಾರ್ಡ್ ಪೊಲೀಸ್ ಠಾಣೆಯ ಕ್ರೈಂ ಸಿಬ್ಬಂದಿಯವರಾದ ಶ್ರೀ ದೇವರಾಜ್, ಹೆಚ್.ಸಿ,, ಶ್ರೀ ಅನೀಲ್, ಹೆಚ್.ಸಿ. ಮತ್ತು ಶ್ರೀ. ಗಂಗಹೊನ್ನಯ್ಯ, ಹೆಚ್.ಸಿ.–4987 ರವರುಗಳು ದಿನಾಂಕ: 04–04–2017 ರಂದು ವಶಕ್ಕೆ ಪಡೆದು, ಠಾಣೆಗೆ ಕರೆದುಕೊಂಡು ಹೋಗಿ ದಿ: 7–4–2017ರವರೆಗೆ ತಮ್ಮ ಸುಪರ್ದಿನಲ್ಲಿ ಇಟ್ಟುಕೊಂಡು, ಈ ಅವಧಿಯಲ್ಲಿ ಹಗಲು ವೇಳೆಯಲ್ಲಿ ಠಾಣೆಯ ಪಕ್ಕದಲ್ಲಿರುವ ರೈತ ಭವನದಲ್ಲಿ, ರಾತ್ರಿ ವೇಳೆಯಲ್ಲಿ ಠಾಣೆಯಲ್ಲಿ ಅಕ್ರಮವಾಗಿ ಇರಿಸಿಕೊಂಡಿರುವುದು ಖಿವರಾಮ್ ರವರ ಜೊತೆ ರೈತಭವನದಲ್ಲಿದ್ದ ಬಿಸಿನೆಸ್ ಪಾರ್ಟರ್‌ಗಳಾದ ಶ್ರೀ ದೂದಾರಾಮ್ ಬಿನ್ ಪಪ್ಪುರಾಮ್ ಮತ್ತು ಶ್ರೀ.ಪೆಹಲಾದ್ ಬಿನ್ ದೂದಾರಾಮ್ ರವರುಗಳ ಹೇಳಿಕೆಗಳಿಂದ ಹಾಗೂ ರೈತ ಭವನದಲ್ಲಿ ಕ್ಲೀನಿಂಗ್ ಕೆಲಸ ಮಾಡುತ್ತಿರುವ ಪ್ರತ್ಯಕ್ಷ ಸಾಕ್ಷೀದಾರರಾದ ಶ್ರೀಮತಿ ಗೌರಮ್ಮ ಕೊಂ ಲೇ: ಕರಿಯಪ್ಪ ರವರುಗಳ ಹೇಳಿಕೆಗಳಿಂದ ಕಂಡುಬಂದಿರುತ್ತದೆ ಹಾಗೂ ದಿನಾಂಕ:7–4–2017 ರಂದು ಮಧ್ಯಾಹ್ನ 1:09:02 ಗಂಟೆ ಸಮಯದಲ್ಲಿ ಖಿವರಾಮ್ ರವರನ್ನು ಆರ್.ಎಂ.ಸಿ.ಯಾರ್ಡ್ ಪೊಲೀಸ್ ಠಾಣೆಯ ಕ್ರೈಂ ಸಿಬ್ಬಂದಿಯವರಾದ ಶ್ರೀ ದೇವರಾಜ್, ಹೆಚ್.ಸಿ, ಶ್ರೀ ಅನೀಲ್, ಹೆಚ್.ಸಿ. ಮತ್ತು ಶ್ರೀ ಗಂಗಹೊನ್ನಯ್ಯ ರವರು ಚಿಕ್ಕಪೇಟೆಯಲ್ಲಿ ಕರೆದುಕೊಂಡು ಬರುತ್ತಿರುವುದು ಶ್ರೀ ಖಿವರಾಮ್ ರವರು ಹಾಜರುಪಡಿಸಿರುವ ಸಿಸಿಟಿವಿ ಪೂಟೇಜ್‌ನಿಂದ ಹಾಗು ಜೊತೆಯಲ್ಲಿ ಕರೆದುಕೊಂಡು ಬಂದ ಇತರೆ ಸಾಕ್ಷೀದಾರರ ಮದನ್‌ಲಾಲ್ ಹಾಗೂ ಮಸ್ತಿಮಲ್ ರವರುಗಳ ಹೇಳಿಕೆಗಳಿಂದ ಕಂಡು ಬಂದಿರುತ್ತದೆ. ಇದನ್ನು ಸಿಬ್ಬಂಧಿ ಗಂಗಹೊನ್ನಯ್ಯ, ಹೆಚ್.ಸಿ. ರವರು ವಿಚಾರಣೆ ಕಾಲದಲ್ಲಿ ಗುರ್ತಿಸಿರುತ್ತಾರೆ. ಈ ವಿಚಾರವಾಗಿ ಖಿವರಾಮ್ ರವರ ಪತ್ನಿ ಶ್ರೀಮತಿ ಪ್ರೇಮ ರವರು ದಿನಾಂಕ: 7–4–2017 ರಂದು ಆಯೋಗಕ್ಕೆ ದೂರು ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ಆಯೋಗದ ಅಧಿಕಾರಿ ಸಿಬ್ಬಂದಿಗಳು ಅರ್ಜಿದಾರರೊಂದಿಗೆ ದಿನಾಂಕ: 7–4–17 ರಂದು ಸಂಜೆ 4–15 ಗಂಟೆಗೆ ಆರ್.ಎಂ.ಸಿ. ಯಾರ್ಡ್ ಪೊಲೀಸ್ ಠಾಣೆಗೆ ಭೇಟಿ ನೀಡಿದ ವಿಷಯ ತಿಳಿದ ಆರ್.ಎಂ.ಸಿ.ಯಾರ್ಡ್ ಪೊಲೀಸ್ ಠಾಣೆಯ ಶ್ರೀ ದೇವರಾಜ್, ಹೆಚ್.ಸಿ., ಶ್ರೀ ಅನೀಲ್, ಹೆಚ್.ಸಿ. ಮತ್ತು ಶ್ರೀ ಗಂಗಹೊನ್ನಯ್ಯ, ಹೆಚ್.ಸಿ.ರವರುಗಳು ಠಾಣೆಯ ಪಕ್ಕದಲ್ಲಿರುವ ರೈತಭವನದಲ್ಲಿ ಇರಿಸಲಾಗಿದ್ದ ನೊಂದ ವ್ಯಕ್ತಿ ಖಿವರಾಮ್ ಮತ್ತು ಜೊತೆಯಲ್ಲಿ ಕರೆತಂದಿದ್ದ ಮಸ್ತಿಮಲ್ ಅಂಗಡಿಯ ಕಮಲೇಶ್ ರವರುಗಳನ್ನು ತಕ್ಷಣ ಕೃಷಿ ಭವನದ ಹಿಂದಿನ ಗೇಟಿನಿಂದ ಆರ್.ಎಂ.ಸಿ. ಯಾರ್ಡ್ ಪೊಲೀಸ್ ಠಾಣೆ ಹಿಂದೆ ಇರುವ ತೋಟಕ್ಕೆ ಕರೆದುಕೊಂಡು ಹೋಗಿ, ನಂತರ ರಾತ್ರಿ 8–00 ಗಂಟೆಗೆ ವಿಧ್ಯಾರಣ್ಯಪುರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ.

ಖಿವರಾಮ್ ರವರ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದ ಮಸ್ತಿಮಲ್ ಅಂಗಡಿಯ ಕಮಲೇಶ್ ರವರನ್ನು ಆರ್.ಎಂ.ಸಿ.ಯಾರ್ಡ್ ಪೊಲೀಸರು ವಾಪಸ್ಸು ಕರೆದುಕೊಂಡು ಬಂದಿದ್ದು, ನಂತರ ಖಿವರಾಮ್ ರವರನ್ನು ವಿಧ್ಯಾರಣ್ಯಪುರ ಪೊಲೀಸ್ ಠಾಣೆ ಮೊ.ಸಂ.240/2015 ಕಲಂ 454-380 ಐಪಿಸಿ ಕೇಸಿನಲ್ಲಿ ದಸ್ತಗಿರಿ ಮಾಡಿರುವುದು, ಚಿಕ್ಕಪೇಟೆಯಿಂದ ಖಿವರಾಮ್ ರವರ ಜೊತೆ ಕರೆದುಕೊಂಡು ಬಂದಿದ್ದ ಮದನ್‌ಲಾಲ್ ಮತ್ತು ಮಸ್ತಿಮಲ್ ರವರ ಹೇಳಿಕೆಯಿಂದ ಕಂಡುಬರುತ್ತದೆ.

ಶ್ರೀ ಖಿವರಾಮ್ ರವರು ವಿಚಾರಣೆ ಕಾಲದಲ್ಲಿ, ತಾನು ಆರ್.ಎಂ.ಸಿ.ಯಾರ್ಡ್ ಪೊಲೀಸರ ವಶದಲ್ಲಿದ್ದಾಗ ದಿ:5-4-2017 ರಂದು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಪೊಲೀಸರು ತನ್ನ ಮೇಲೆ ಹಲ್ಲೆ ಮಾಡಿದ್ದು, ಈ ಬಗ್ಗೆ ದಿ:20-4-2017 ರಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುವುದಾಗಿ ತಿಳಿಸಿ ಹೊರರೋಗಿ ಚೀಟಿಯನ್ನು ವಿಚಾರಣೆಗೆ ಹಾಜರುಪಡಿಸಿದ್ದು, ಈ ಬಗ್ಗೆ ವಿಕ್ಟೋರಿಯಾ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಮತ್ತು ಗಾಯಗಳ ಬಗ್ಗೆ ವೈಧ್ಯರಿಂದ ಸ್ಪಷ್ಟೀಕರಣ ಪಡೆಯಲಾಗಿದ್ದು, ವೈಧ್ಯರು ನೀಡಿರುವ ಗಾಯದ ಪ್ರಮಾಣ ಪತ್ರದಲ್ಲಿ ದಿ:20-04-2017 ರಂದು ಖಿವರಾಮ್ ರವರಿಗೆ ಹೊರೋಗಿಯಾಗಿ ಚಿಕಿತ್ಸೆ ನೀಡಿದ್ದು, ಚಿಕಿತ್ಸೆ ಸಮಯದಲ್ಲಿ ಖಿವರಾಮ್ ರವರು ದಿ:5-4-2017 ರಂದು ಪೊಲೀಸರು ಹಲ್ಲೆ ಮಾಡಿರುವುದಾಗಿ ತಿಳಿಸಿರುವುದಾಗಿ ಹಾಗೂ ಸದರಿ ಗಾಯಗಳು ಸಾಮಾನ್ಯ ಗಾಯಗಳಾಗಿರುತ್ತವೆ ಎಂದು ನಮೂದಿಸಿರುವುದು ಕಂಡುಬರುತ್ತದೆ. ಹಾಗೂ ಈ ಗಾಯಗಳ ಬಗ್ಗೆ ವೈಧ್ಯರು 1) It may be due to a clobe like thing, 2)The duration of the injuries in between 10 to 15 days ಎಂದು ಸ್ಪಷ್ಟೀಕರಣ ನೀಡಿರುವುದು ಅನುಬಂಧ-14ರಿಂದ ಕಂಡುಬಂದಿರುತ್ತದೆ.

ಅರ್ಜಿದಾರರ ದೂರಿಗೆ ಸಂಬಂಧಿಸಿದಂತೆ ವಿಚಾರಣೆ ಕಾಲದಲ್ಲಿ ದಾಖಲಿಸಿಕೊಳ್ಳಲಾದ ಮೇಲ್ಕಂಡ ಎಲ್ಲಾ ಸಾಕ್ಷೀದಾರರುಗಳ ಹೇಳಿಕೆ ಮತ್ತು ಸಂಗ್ರಹಿಸಲಾದ ದಾಖಲಾತಿಗಳು, ಸಿಸಿಟಿವಿ ದೃಶ್ಯಾವಳಿ ಹಾಗೂ ವೈಧ್ಯರ ವೈಧ್ಯಕೀಯ ಪ್ರಮಾಣ ಪತ್ರದ ಪರಿಶೀಲನೆಯಿಂದ ಆರ್.ಎಂ.ಸಿ.ಯಾರ್ಡ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಹಮದ್ ಮುಕಾರಾಮ್ ಮತ್ತು ಕ್ರೈಂ ಸಿಬ್ಬಂಧಿಯವರಾದ ಶ್ರೀ ದೇವರಾಜ್, ಹೆಚ್.ಸಿ. ಶ್ರೀ ಅನೀಲ್, ಹೆಚ್.ಸಿ. ಮತ್ತು ಶ್ರೀ ಗಂಗಹೊನ್ನಯ್ಯ, ಹೆಚ್.ಸಿ.-4987 ರವರುಗಳು ಅರ್ಜಿದಾರರ ಗಂಡ ಶ್ರೀ ಖಿವರಾಮ್ ರವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗದೆ ಇದ್ದರು, ದಿನಾಂಕ.04.04.2017 ರಂದು ವಶಕ್ಕೆ ಪಡೆದು, ದಿನಾಂಕ:07.04.2017 ರಂದು ರಾತ್ರಿ 8-00 ಗಂಟೆವರೆಗೆ ತಮ್ಮ ವಶದಲ್ಲಿ ಅಕ್ರಮವಾಗಿ ಇರಿಸಿಕೊಂಡು, ಹಲ್ಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಎಂಬ ಅಭಿಪ್ರಾಯದ ವರದಿಯನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಮಾನ್ಯ ಆಯೋಗಕ್ಕೆ ವರದಿ ಸಲ್ಲಿಸಿದೆ."

ದೂರು ಮತ್ತು ವರದಿಯನ್ನು ಪರಿಶೀಲಿಸಲಾಗಿ, ದೂರುದಾರರ ಪತಿಯನ್ನು ದಿನಾಂಕ. 04.04.2017ರಿಂದ 07.04.2017ರ ರಾತ್ರಿ 8.00 ಗಂಟೆಯವರೆಗೆ ಅಕ್ರಮವಾಗಿ ಪೊಲೀಸರು ವಶದಲ್ಲಿ ಇರಿಸಿಕೊಂಡು ಹಲ್ಲೆ ಮಾಡಿರುವುದು ಕಂಡು ಬಂದಿರುವುದರಿಂದ, ಈ ಬಗ್ಗೆ ತಾವು ಹೇಳುವುದೇನಾದರೂ ಇದ್ದಲ್ಲಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಿ ನಿಮ್ಮ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು, ಕಲಂ 16ರ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993ರ ಅಡಿಯಲ್ಲಿ ಅಂದಿನ ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯ 1) ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೊಹಮದ್ ಮುಕಾರಾಮ್(ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್ ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು), 2) ಶ್ರೀ ದೇವರಾಜ್, ಹೆಚ್.ಸಿ–4208, (ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಸಿ.ಸಿ.ಬಿ, ಚಾಮರಾಜಪೇಟೆ), 3) ಶ್ರೀ ಅನಿಲ್‌ಕುಮಾರ್ ಹೆಚ್.ಸಿ–8204, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆ, ಬೆಂಗಳೂರು, 4) ಶ್ರೀ ಗಂಗಹೊನ್ನಯ್ಯ, ಹೆಚ್.ಸಿ–4987, (ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಜೆ.ಸಿ ನಗರ ಪೊಲೀಸ್ ಠಾಣೆ) ರವರುಗಳಿಗೆ ನೋಟೀಸ್ ಜಾರಿ ಮಾಡಲಾಗಿದ್ದು, ಅದರಂತೆ ದೂರುದಾರರು ಹಾಗೂ ಅವರ ಗಂಡ ಶ್ರೀ ಖಿವರಾಮ್ ರವರೊಂದಿಗೆ ಆಯೋಗಕ್ಕೆ ಹಾಜರಾಗುವಂತೆ ತಿಳಿಸಿದ್ದು, ದಿನಾಂಕ. 18.09.2020 ರಂದು ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಹಮದ್ ಮುಕಾರಾಮ್, ಶ್ರೀ ದೇವರಾಜ್, ಹಾಲಿ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಸಿ.ಸಿ.ಬಿ ಮತ್ತು ಶ್ರೀ ಗಂಗಹೊನ್ನಯ್ಯ, ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಜೆ.ಸಿ ನಗರ ಪೊಲೀಸ್ ಠಾಣೆ ರವರು ಹಾಜರಾಗಿದ್ದರು. ದೂರುದಾರರಾದ ಶ್ರೀಮತಿ ಪ್ರೇಮ ಹಾಗೂ ಶ್ರೀ ಲಲಿತ್ ಬಿನ್ ರಮೇಶ್ ಕುಮಾರ್ ರವರು ಆಯೋಗದ ಮುಂದೆ ಹಾಜರಾಗಿ ಶ್ರೀ ಖಿವರಾಮ್ @ ಜೀತು ರವರು ಮೃತರಾಗಿರುವುದಾಗಿ ತಿಳಿಸಿದರಿಂದ ಆಯೋಗವು ಮುಂದಿನ ದಿನಾಂಕದಂದು ಮರಣ ಪ್ರಮಾಣ ಪತ್ರದ ಪ್ರತಿಯನ್ನು ಹಾಜರುಪಡಿಸುವಂತೆ ಆದೇಶಿಸಿರುತ್ತದೆ. ಮುಂದುವರೆದು, ಆಯೋಗವು ಶ್ರೀ ಲಲಿತ್‌ರವರು ಆಯೋಗದ ಡಿವೈಎಸ್‌ಪಿ ರವರ ಮುಂದೆ ನೀಡಿರುವ ಹೇಳಿಕೆಯನ್ನು ಮತ್ತೆ ಓದಿ, ಹೇಳಿ, ಕೇಳಲಾಗಿ ಶ್ರೀ ಲಲಿತ್‌ರವರು ಸರಿ ಇದೆ ಎಂದು ಹೇಳಿರುತ್ತಾರೆ.

ತದನಂತರ ದಿನಾಂಕ. 09.10.2020 ರಂದು ಶ್ರೀ ದೇವರಾಜ್, ಹಾಲಿ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಸಿ.ಸಿ.ಬಿ, ಶ್ರೀ ಗಂಗಹೊನ್ನಯ್ಯ, ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಜೆ.ಸಿ ನಗರ ಪೊಲೀಸ್ ಠಾಣೆ ಮತ್ತು ಶ್ರೀ ಅನಿಲ್ ಕುಮಾರ್ ಹೆಚ್.ಸಿ–8204, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆ, ಬೆಂಗಳೂರು, ರವರು ಹಾಜರಾಗಿ, ಮತ್ತೊಂದು ದಿನಾಂಕವನ್ನು ನೀಡಲು ಮನವಿ ಮಾಡಿರುತ್ತಾರೆ. ಶ್ರೀ ಲಲಿತ್ ರವರು ಆಯೋಗದ ಮುಂದೆ ಹಾಜರಾಗಿ, ಅವರ ಹೇಳಿಕೆಯನ್ನು ನೀಡಿದ್ದು, ಈ ಕೆಳಕಂಡಂತೆ ಇದೆ:

"I state that I am working in the Department stores of late Sri Khivram. Sri Khivram died on 28.08.2018. I have produced the xerox copy of the death certificate before the Commission. On 06.04.2017 at about 11 a.m. in the morning Smt Prema wife of late Sri Khivram directed me to go to RMC Yard police station and check whether Sri Khivram is there as Sri Khivram has not returned home. I was also told on 05.04.2017 at around 9 P.M. in the night by one Smt Jayanthi a customer over phone that Sri Pehlad and Sri Doodaram who are the tenants of Smt Jayanthi(that they) have been taken by RMC Yard police. On 06.04.2017 after 11.00 a.m., I went to RMC Yard police station. At the police station, I met Sri Devaraj, HC now ASI CCB Bangalore and asked him if the police have brought Sri Khivaram, Sri Pehlad and Sri Doodaram. Sri Devaraj told me that nobody has been brought to the police station and questioned me as to why I had come there. While, I was coming out of the police station after meeting Sri Devaraj, I saw Sri Pehlad entering police station handcuffed along with a Crime police constable. At that time, Sri Devaraj called me and when I went to him, he took away my two mobile phones and made me to sit in a room saying that I should not tell that Sri Pehlad has been brought to the police station hand cuffed. Sri Devaraj also hit me on my face. Then, I was sitting in the room and I saw Sri Khivram being brought to the police station by a police personnel. Sri Khivram was taken to another room and while I was sitting in my room in the police station I heard Sri Khivram crying with pain as he was being beaten. After about 1½ hours, I was given the mobile phones by Sri Devaraj in the presence of Sri Mohammed Mukram, Police Inspector and then Sri Mohammed Mukram told me that I should not disclose anything happening in the police station and then I was sent out of the police station. I then came back to the Departmental stores and then I told Smt Prema wife of Khivram what I saw in the police station.

Thereafter, on 07.04.2017 I came along with Smt Prema to the Karnataka State Human Rights Commission in the afternoon and gave complaint through Smt Prema. Thereafter, police personnel of Human Rights Commission came along with me and Smt Prema to RMC Yard Police Station. While we were entering the police station we saw some Marwari persons running away from

the police station. I state that Sri K.E Keshav, Dy. S.P. of the Human Rights Commission checked the police station premises as well as all the required documents and made enquiries but could not find Sri Pehlad, Sri Doodaram or Sri Khivram. Sri Devaraj and Sri Mohammed Mukram were not there. After some time, Police Inspector Sri Mohammed Mukram came along with the Assistant Commissioner of Police. Thereafter Sri Mohammed Mukram looked at me and told " I have asked to issue notice in a drug case against Sri Lalith". Thereafter, as we could not find anyone taken to custody by the police, we came back.

On 08.04.2017, I received a call from one Sri Jayaram that Sri Khivram has been arrested in a case registered in Vidyaranyapura police station and will be produced in the court and that I should go to the court. When I went to the court at 03.00 P.M, I saw Sri Khivram and another Sri Premaram were brought in the police jeep...."

ತದನಂತರ ದಿನಾಂಕ. 12.11.2020 ರಂದು ಶ್ರೀ ದೇವರಾಜ್, ಹಾಲಿ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಸಿ.ಸಿ.ಬಿ, ಶ್ರೀ ಗಂಗಹೊನ್ನಯ್ಯ, ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಜೆ.ಸಿ ನಗರ ಪೊಲೀಸ್ ಠಾಣೆ, ಶ್ರೀ ಅನಿಲ್ ಕುಮಾರ್ ಹೆಚ್.ಸಿ–8204, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆ, ಬೆಂಗಳೂರು ಹಾಗೂ ಶ್ರೀ ಲಲಿತ್ ರವರು ಆಯೋಗದ ಮುಂದೆ ಹಾಜರಾಗಿದ್ದು, ಮೇಲ್ಕಂಡ ಪೊಲೀಸ್ ಅಧಿಕಾರಿಗಳು ಅವರ ಹೇಳಿಕೆಗಳನ್ನು ಆಯೋಗದ ಮುಂದೆ ನೀಡಿರುತ್ತಾರೆ. ಸದರಿ ಪೊಲೀಸ್ ಅಧಿಕಾರಿಗಳ ಹೇಳಿಕೆಗಳಲ್ಲಿ ಅವರು ಶ್ರೀ ಖಿವರಾಮ್ ರವರನ್ನು ಅಕ್ರಮ ಬಂಧನದಲ್ಲಿ ಇಟ್ಟಿರುವುದಿಲ್ಲವೆಂದು, ಹಲ್ಲೆ ಮಾಡಿರುವುದಿಲ್ಲವೆಂದು, ಹಾಗೂ ಪೊಲೀಸರಿಗೆ ಖಿವರಾಮ್ ರವರು ಬಾತ್ಮಿದಾರರಾಗಿ ನಿಕಟ ಸಂಪರ್ಕ ಹೊಂದಿದ್ದು, ಸದರಿ ಖಿವರಾಮ್ ರವರನ್ನು ಅಕ್ರಮವಾಗಿ ಇಟ್ಟುಕೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ದೂರರ್ಜಿಯಲ್ಲಿ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿದೆ ಎಂದು ಹೇಳಿಕೆ ಸಲ್ಲಿಸಿರುತ್ತಾರೆ.

ದಿನಾಂಕ.25.01.2021 ರಂದು ಶ್ರೀ ಮೊಹಮದ್ ಮುಕಾರಾಮ್ ಪೊಲೀಸ್ ಇನ್ಸ್‌ಪೆಕ್ಟರ್, ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು ರವರು ಆಯೋಗದ ಮುಂದೆ ಹಾಜರಾಗಿ ಅವರ ಲಿಖಿತ ಹೇಳಿಕೆಯ ದಿನಾಂಕ.08.10.2020ರ ಪತ್ರವನ್ನು ಸಲ್ಲಿಸಿ, ಹಾಗೂ ಸದರಿಯವರು ಅವರ ಹೇಳಿಕೆಯನ್ನು ಆಯೋಗದ ಮುಂದೆಯೂ ಸಹ ನೀಡಿರುತ್ತಾರೆ. ದಿನಾಂಕ.08.10.2020 ರ ಲಿಖಿತ

ಹೇಳಿಕೆಯ ಸಾರಾಂಶವೇನೆಂದರೆ ದೂರುದಾರರು ನೀಡಿರುವ ದೂರರ್ಜಿಯಲ್ಲಿರುವ ಆಪಾದನೆಗಳನ್ನು ಅಲ್ಲಗಳೆದು ದಿನಾಂಕ.07.04.2017 ರಂದು ಬೆಂಗಳೂರು ನಗರ ವಿದ್ಯಾರಣ್ಯಪುರ ಪೊಲೀಸ್ ಠಾಣಾ ಮೊ.ಸಂಖ್ಯೆ. 240/2015 ಕಲಂ 454–380 ಐಪಿಸಿ ಕೇಸಿನಲ್ಲಿ ಖಿವರಾಮ್ ಮತ್ತು ಪ್ರೇಮರಾಮ್ ರವರುಗಳನ್ನು ದಸ್ತಗಿರಿ ಮಾಡಿ ಚಿನ್ನ ಒಡವೆಗಳನ್ನು ಅಮಾನತ್ತುಪಡಿಸಿಕೊಂಡು ದಿನಾಂಕ. 08.04.2017 ರಂದು ಸದರಿ ಆರೋಪಿಗಳನ್ನು ಕಾನೂನುಬದ್ಧವಾಗಿ ಮಾನ್ಯ ನ್ಯಾಯಾಲಯಕ್ಕೆ ಹಾರಜುಪಡಿಸಿರುತ್ತಾರೆ. ಮುಂದುವರೆದು ಖಿವರಾಮ್ ರವರು ಸುಮಾರು 10 ವರ್ಷಗಳಿಂದ ಪೊಲೀಸರಿಗೆ ಬಾತ್ಮಿದಾರರಾಗಿ ನಿಕಟ ಸಂಪರ್ಕ ಹೊಂದಿದ್ದು, ಸದರಿ ಖಿವರಾಮ್ ರವರನ್ನು ಅಕ್ರಮವಾಗಿ ಇಟ್ಟುಕೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದು ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತಾರೆ. ನಂತರ, ರೈತಭವನದಲ್ಲಿ ಖಿವರಾಮ್ ರವರನ್ನು ಅಕ್ರಮವಾಗಿ ಇಟ್ಟುಕೊಂಡಿರುವ ಆಪಾದನೆಯ ಬಗ್ಗೆ ರೈತಭವನದ ಸ್ವಾಗತಗಾರರ ಪುಸ್ತಕದ ರಿಜಿಸ್ಟರ್ ಅನ್ನು ಪರಿಶೀಲಿಸಲಾಗಿ, ದಿನಾಂಕ.04.04.2017 ರಿಂದ ದಿನಾಂಕ.07.04.2017 ರವರೆಗೂ ಖಿವರಾಮ್ ರವರ ಅಥವಾ ಪೊಲೀಸ್ ರವರ ಹೆಸರಿನಲ್ಲಿ ಯಾವುದೇ ರೂಂ ಪಡೆದು ಕೊಂಡು ಅಕ್ರಮವಾಗಿ ಇಟ್ಟುಕೊಂಡಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ದಿನಾಂಕ. 07.04.2017 ರಂದು ಮದ್ಯಾಹ್ನ 1:09:02 ಗಂಟೆಯಲ್ಲಿ ಅಪರಾಧ ಸಿಬ್ಬಂದಿಯವರಾದ ಶ್ರೀ ಅನಿಲ್ ಕುಮಾರ್, ಶ್ರೀ ದೇವರಾಜ್, ಶ್ರೀ ಗಂಗಹೊನ್ನಯ್ಯ ರವರುಗಳು ಬೇರೆ ಯಾವುದೋ ಪ್ರಕರಣದ ಮಾಹಿತಿಯ ಮೇರೆಗೆ ಚಿಕ್ಕಪೇಟೆಗೆ ಹೋಗಿದ್ದು, ಖಿವರಾಮ್ ರವರು ಆ ಸಮಯದಲ್ಲಿ ನಮ್ಮ ಸಿಬ್ಬಂದಿಯವರಿಗೆ ಭೇಟಿಯಾಗಿದ್ದು, ಯಾವುದೋ ಬೇರೆ ಪ್ರಕರಣದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯಾವಳಿ ಸೆರೆಯಾಗಿರಬಹುದೆಂದು ಹೇಳಿರುತ್ತಾರೆ. ದೂರರ್ಜಿದಾರರಾದ ಶ್ರೀಮತಿ ಪ್ರೇಮ ರವರು ತನ್ನ ಗಂಡ ಮನೆಗೆ ವಾಪಸ್ ಬಾರದೇ ಇರುವ ಬಗ್ಗೆ ನೇರವಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಬಹುದಿತ್ತೆಂದು ಅವರ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಪ್ರತ್ಯಕ್ಷ ಸಾಕ್ಷಿಯಾದ ಶ್ರೀಮತಿ ಗೌರಮ್ಮ ರವರು ಆಯೋಗದ ಡಿವೈಎಸ್‌ಪಿ ರವರ ಮುಂದೆ ಅವರ ಹೇಳಿಕೆಯನ್ನು ನೀಡಿದ್ದು, ದಿನಾಂಕ.04.04.2017 ರಿಂದ 07.04.2017ರ ಅವಧಿಯಲ್ಲಿ ಡಿ ಗ್ರೂಪ್ ನೌಕರರು/ಸ್ವಚ್ಚತಾ ಕಾರ್ಮಿಕರಾಗಿ ಎಪಿಎಂಸಿ ಯಾರ್ಡ್ ಸಮಿತಿಯಲ್ಲಿ ಕೆಲಸ ಮಾಡಿರುವುದಿಲ್ಲವೆಂಬ ಮಾಹಿತಿಯನ್ನು ಲಿಖಿತವಾಗಿ ವರದಿಯನ್ನು ನೀಡಿರುತ್ತಾರೆ. ಆದುದರಿಂದ ಡಿವೈಎಸ್‌ಪಿ ರವರು ನೀಡಿರುವ ವರದಿಯನ್ನು ಪುರಸ್ಕರಿಸದೆ ಈ ಮೇಲಿನ ಅಂಶಗಳನ್ನು ಪರಿಗಣಿಸಿ ನಮ್ಮನ್ನು ಆರೋಪ ಮುಕ್ತರನ್ನಾಗಿ ಮಾಡಬೇಕೆಂದು ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣದ ದಾಖಲೆಗಳು, ಹೇಳಿಕೆಗಳು, ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಅರ್ಜಿದಾರರ ಪತಿಯಾದ ಖಿವರಾಮ್ ರವರನ್ನು ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯ ಕ್ರೈಂ ಸಿಬ್ಬಂದಿಯವರಾದ ಶ್ರೀ ದೇವರಾಜ್ ಹೆಚ್.ಸಿ–4208, ಶ್ರೀ ಅನಿಲ್‌ಕುಮಾರ್ ಹೆಚ್.ಸಿ–8204, ಶ್ರೀ ಗಂಗಹೊನ್ನಯ್ಯ ಹೆಚ್.ಸಿ–4987, ರವರುಗಳು ದಿನಾಂಕ. 04.04.2017ರಂದು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಹೋಗಿ ದಿನಾಂಕ.07.04.2017 ರವರೆಗೆ ಅವರ ಸುಪರ್ದಿಯಲ್ಲಿ ಇಟ್ಟುಕೊಂಡಿದ್ದು, ಆ ಅವಧಿಯಲ್ಲಿ ಹಗಲು ವೇಳೆಯಲ್ಲಿ ಠಾಣೆಯ ಪಕ್ಕದಲ್ಲಿರುವ ರೈತ ಭವನದಲ್ಲಿ ಅಕ್ರಮವಾಗಿ ಇರಿಸಿಕೊಂಡಿರುವುದು ಖಿವರಾಮ್ ರವರ ಜೊತೆ ರೈತಭವನದಲ್ಲಿ ಇದ್ದ ಶ್ರೀ ಪಪ್ಪುರಾಮ್, ಶ್ರೀ ಪೆಹಲಾದ್‌ರವರುಗಳ ಹೇಳಿಕೆಗಳಿಂದ ಹಾಗೂ ರೈತ ಭವನದಲ್ಲಿ ಸದರಿ ಪೊಲೀಸರು ಖಿವರಾಮ್ ರವರನ್ನು ಅಕ್ರಮ ಬಂಧನದಲ್ಲಿಟ್ಟಿರುವುದು ಕ್ಲಿನಿಂಗ್ ಕೆಲಸ ಮಾಡುತ್ತಿರುವ ಪ್ರತ್ಯಕ್ಷ ಸಾಕ್ಷಿಯಾದ ಶ್ರೀಮತಿ ಗೌರಮ್ಮ ಮತ್ತು ಖಿವರಾಮ್ ರವರ ಹೇಳಿಕೆಗಳಿಂದ ಕಂಡು ಬರುತ್ತದೆ. ದಿನಾಂಕ. 07.04.2017 ರಂದು ಮದ್ಯಾಹ್ನ 1:09:02 ಗಂಟೆ ಸಮಯದಲ್ಲಿ ಖಿವರಾಮ್ ರವರನ್ನು ಮೇಲೆ ಹೇಳಲಾದ ಸದರಿ ಪೊಲೀಸರುಗಳು ಚಿಕ್ಕಪೇಟೆಗೆ ಕರೆದುಕೊಂಡು ಬಂದಿರುವುದನ್ನು ಖಿವರಾಮ್ ನೀಡಿರುವ ಸಿಸಿಟಿವಿ ಫೂಟೇಜ್ ನಿಂದ ಹಾಗೂ ಜೊತೆಯಲ್ಲಿ ಕರೆದುಕೊಂಡು ಬಂದ ಇತರೆ ಸಾಕ್ಷಿದಾರರಾದ ಶ್ರೀ ಮದನ್‌ಲಾಲ್ ಮತ್ತು ಶ್ರೀ ಮಸ್ತಿಮಲ್ ರವರ ಹೇಳಿಕೆಗಳಿಂದ ಕಂಡು ಬರುತ್ತದೆ. ಆದರೆ, ಶ್ರೀ ಪುನೀತ್ ಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್, ವಿದ್ಯಾರಣ್ಯಪುರ ಪೊಲೀಸ್ ಠಾಣೆ, ಬೆಂಗಳೂರು ರವರು ಆಯೋಗದ ಡಿವೈ.ಎಸ್.ಪಿ ರವರ ಮುಂದೆ ನೀಡಿರುವ ಹೇಳಿಕೆಯಲ್ಲಿ ತಾನು ದಿನಾಂಕ 07–04–2017ರಂದು ಅವರ ಠಾಣೆಯ ಅಪರಾಧ ವಿಭಾಗದ ಸಿಬ್ಬಂದಿಯವರಾದ ಶ್ರೀ ಎಸ್.ಚಂದ್ರಶೇಖರಯ್ಯ ಎ.ಎಸ್.ಐ ಮತ್ತು ಶ್ರೀ ರಾಜುಕಲಾಲ್ ಪಿ.ಸಿ.11570 ರವರಿಗೆ ತಮ್ಮ ಠಾಣೆಯಲ್ಲಿ ದಾಖಲಾಗಿರುವ ಹಳೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಲು ಮತ್ತು ಆರೋಪಿಗಳನ್ನು ಪತ್ತೆ ಮಾಡಿಕೊಂಡು ಬರುವಂತೆ ಕರ್ತವ್ಯ ನೇಮಕ ಮಾಡಿದ್ದು, ಅದರಂತೆ ಸಿಬ್ಬಂದಿಯವರು ಮದ್ಯಾಹ್ನ ಸುಮಾರು 12.30 ಗಂಟೆಯಲ್ಲಿ ನಂಜಪ್ಪ ಸರ್ಕಲ್ ಬಳಿಯಿಂದ ಶ್ರೀ ಪ್ರೇಮಾರಾಮ್ ಹಾಗೂ ದೂರುದಾರರ ಪತಿಯಾದ ಶ್ರೀ ಖಿವರಾಮ್ ರವರನ್ನು ಅನುಮಾನದ ಮೇರೆಗೆ ಠಾಣೆಗೆ ಕರೆದುಕೊಂಡು ಬಂದು ತನ್ನ ಮುಂದೆ ಹಾಜರುಪಡಿಸಿ ಮುಂದಿನ ಕ್ರಮಕ್ಕಾಗಿ ವರದಿ ನೀಡಿರುತ್ತಾರೆಂಬುದು ತಿಳಿದುಬಂದಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂದಿಗಳಾದ ಶ್ರೀ ದೇವರಾಜ್, ಹೆಚ್.ಸಿ–4208, ಶ್ರೀ ಅನಿಲ್‌ಕುಮಾರ್ ಹೆಚ್.ಸಿ–8204, ಹಾಗೂ ಶ್ರೀ ಗಂಗಹೊನ್ನಯ್ಯ, ಹೆಚ್.ಸಿ–4987 ರವರುಗಳ ಹೇಳಿಕೆಗಳಲ್ಲಿ ಅವರುಗಳು ದಿನಾಂಕ 07–04–2017 ರಂದು ಯಾವುದೋ ಕೆಲಸದ ನಿಮಿತ್ತ ಚಿಕ್ಕಪೇಟೆಗೆ ಹೋಗಿದ್ದು, ಶ್ರೀ ಖಿವರಾಮ್‌ರವರು ತಮಗೆ

ಸಿಕ್ಕಿದ್ದು, ಶ್ರೀ ಖಿವರಾಮ್ ಜೊತೆ ಮಾತನಾಡಿರುವುದು, ಹಾಗೂ ಸಿಸಿಟಿವಿ ಪೂಟೇಜ್ ನಲ್ಲಿ ತೋರಿಸಿರುವ ಸಮಯ 01:09:02 ರಲ್ಲಿ ಶ್ರೀ ಖಿವರಾಮ್‌ರವರು ಜೊತೆ ಅವರುಗಳೆ ಇರುವುದು ಎಂದು ಹೇಳಿರುತ್ತಾರೆ. ಆದರೆ, ದಿನಾಂಕ 07–04–2017 ರಂದು ವಿದ್ಯಾರಣ್ಯಪುರ ಪೊಲೀಸರು ಶ್ರೀ ಖಿವರಾಮ್ ರವರನ್ನು ಮಧ್ಯಾಹ್ನ 12.30 ಗಂಟೆಗೆ ವಿದ್ಯಾರಣ್ಯಪುರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು, ಆರ್.ಎಂ.ಸಿ. ಯಾರ್ಡ್ ಪೊಲೀಸರಾದ ಶ್ರೀ ದೇವರಾಜ್, ಹೆಚ್.ಸಿ–4208, ಶ್ರೀ ಅನಿಲ್‌ಕುಮಾರ್ ಹೆಚ್.ಸಿ–8204, ಹಾಗೂ ಶ್ರೀ ಗಂಗಹೊನ್ನಯ್ಯ, ಹೆಚ್.ಸಿ–4987 ರವರುಗಳಿಗೆ ಶ್ರೀ ಖಿವರಾಮ್ ರವರು ಸ್ವತಃ ಚಿಕ್ಕಪೇಟೆಯಲ್ಲಿ ಸಮಯ 01:09:02 ಕ್ಕೆ ಹೇಗೆ ಸಿಗಲು ಸಾಧ್ಯ? ಅವಶ್ಯಕವಾಗಿ ಶ್ರೀ ಖಿವರಾಮ್ ರವರು ಪೊಲೀಸರ ವಶದಲ್ಲಿದ್ದರು.

ದಿನಾಂಕ:5–4–2017ರಂದ ಮಧ್ಯಾಹ್ನ 12–00 ಗಂಟೆ ಸಮಯದಲ್ಲಿ ಪೊಲೀಸರು ಖಿವರಾಮ್ ರವರ ಮೇಲೆ ಹಲ್ಲೆ ಮಾಡಿದ್ದು, ಈ ಬಗ್ಗೆ ದಿ:20–4–2017 ರಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುವುದಾಗಿ ತಿಳಿಸಿ ಹೊರರೋಗಿ ಚೀಟಿಯನ್ನು ವಿಚಾರಣೆಗೆ ಹಾಜರುಪಡಿಸಿದ್ದು, ಈ ಬಗ್ಗೆ ವಿಕ್ಟೋರಿಯಾ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಮತ್ತು ಗಾಯಗಳ ಬಗ್ಗೆ ವೈದ್ಯರಿಂದ ಸ್ಪಷ್ಟೀಕರಣ ಪಡೆಯಲಾಗಿದ್ದು, ವೈದ್ಯರು ನೀಡಿರುವ ಗಾಯದ ಪ್ರಮಾಣ ಪತ್ರದಲ್ಲಿ ದಿ:20–04–2017 ರಂದು ಖಿವರಾಮ್ ರವರಿಗೆ ಹೊರರೋಗಿಯಾಗಿ ಚಿಕಿತ್ಸೆ ನೀಡಿದ್ದು, ಚಿಕಿತ್ಸೆ ಸಮಯದಲ್ಲಿ ಖಿವರಾಮ್ ರವರು ದಿ:5–4–2017 ರಂದು ಪೊಲೀಸರು ಹಲ್ಲೆ ಮಾಡಿರುವುದಾಗಿ ತಿಳಿಸಿರುವುದಾಗಿ ಹಾಗೂ ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಎಂಬುದು ಖಿವರಾಮ್ ರವರ ಹೇಳಿಕೆ ಹಾಗೂ ಹೊರ ರೋಗಿ ಚಿಕಿತ್ಸಾ ವಿವರದಲ್ಲಿ ಕಂಡುಬರುತ್ತದೆ. ಮುಂದುವರೆದು, ಲಲಿತ್ ರವರ ಹೇಳಿಕೆಯಲ್ಲಿ ಖಿವರಾಮ್ ರವರನ್ನು ಅಕ್ರಮ ಬಂಧನದಲ್ಲಿಟ್ಟು, ಅವರು ನೋವಿನಲ್ಲಿ ನರಳುತ್ತಿದ್ದು, ಇದರ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಮೊಹಮದ್ ಮುಕಾರಾಮ್ ರವರು ಈ ಘಟನೆಯ ಬಗ್ಗೆ ಎಲ್ಲೂ ಹೇಳಬಾರದಾಗಿ ಬೆದರಿಕೆ ಹಾಕಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಅರ್ಜಿದಾರರ ದೂರಿಗೆ ಸಂಬಂಧಿಸಿದಂತೆ ವಿಚಾರಣೆ ಕಾಲದಲ್ಲಿ ದಾಖಲಿಸಿಕೊಳ್ಳಲಾದ ಮೇಲ್ಕಂಡ ಎಲ್ಲಾ ಸಾಕ್ಷೀದಾರರುಗಳ ಹೇಳಿಕೆ ಮತ್ತು ಸಂಗ್ರಹಿಸಲಾದ ದಾಖಲಾತಿಗಳು, ಸಿಸಿಟಿವಿ ದೃಶ್ಯಾವಳಿ ಹಾಗೂ ವೈದ್ಯರ ವೈದ್ಯಕೀಯ ಪ್ರಮಾಣ ಪತ್ರದ ಪರಿಶೀಲನೆಯಿಂದ ಆರ್.ಎಂ.ಸಿ.ಯಾರ್ಡ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಹಮದ್ ಮುಕಾರಾಮ್ ಮತ್ತು ಕ್ರೈಂ ಸಿಬ್ಬಂದಿಯವರಾದ ಶ್ರೀ ದೇವರಾಜ್, ಹೆಚ್.ಸಿ–4208, ಶ್ರೀ ಅನೀಲ್ ಕುಮಾರ್, ಹೆಚ್.ಸಿ–8204, ಮತ್ತು ಶ್ರೀ ಗಂಗಹೊನ್ನಯ್ಯ, ಹೆಚ್.ಸಿ.–4987 ರವರುಗಳು ಅರ್ಜಿದಾರರ ಗಂಡ ಶ್ರೀ

ಖಿವರಾಮ್ ರವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗದೆ ಇದ್ದರು, ದಿನಾಂಕ.04.04.2017 ರಂದು ವಶಕ್ಕೆ ಪಡೆದು, ದಿನಾಂಕ.07.04.2017 ರಂದು ರಾತ್ರಿ 8–00 ಗಂಟೆವರೆಗೆ ತಮ್ಮ ವಶದಲ್ಲಿ ಅಕ್ರಮವಾಗಿ ಇರಿಸಿಕೊಂಡು, ಹಲ್ಲೆ ಮಾಡಿರುವುದು ಕಂಡು ಬಂದಿರುತ್ತದೆ. ಮೇಲ್ಕಂಡ ಕಾರಣಗಳಿಂದ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

1. ದೂರರ್ಜಿದಾರರಾದ ಶ್ರೀಮತಿ ಪ್ರೇಮರವರ ಪತಿ ಶ್ರೀ ಖಿವರಾಮ್ ರವರು ಮೃತರಾಗಿರುವುದರಿಂದ ಅವರ ಪರವಾಗಿ ಅವರ ಪತ್ನಿ ಶ್ರೀಮತಿ ಪ್ರೇಮ ರವರಿಗೆ ರೂ. 1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಇಲಾಖಾ ವಿಚಾರಣೆಯಾದ ನಂತರ ವಿಚಾರಣೆಯ ತೀರ್ಪಿಗೊಳಪಟ್ಟು ಅಂದಿನ ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯ ಅಧಿಕಾರಿಗಳಾದ 1) ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೊಹಮದ್ ಮುಕಾರಾಮ್ (ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್ ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು), 2) ಶ್ರೀ ದೇವರಾಜ್, ಹೆಚ್.ಸಿ–4208, (ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಸಿ.ಸಿ.ಬಿ, ಚಾಮರಾಜಪೇಟೆ), 3) ಶ್ರೀ ಅನಿಲ್‌ಕುಮಾರ್ ಹೆಚ್.ಸಿ–8204, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆ, ಬೆಂಗಳೂರು, 4) ಶ್ರೀ ಗಂಗಹೊನ್ನಯ್ಯ, ಹೆಚ್.ಸಿ–4987, (ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಜೆ.ಸಿ ನಗರ ಪೊಲೀಸ್ ಠಾಣೆ) ರವರುಗಳ ವೇತನದಿಂದ ಸಮನಾಗಿ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.

2. ದೂರುದಾರರಾದ ಪತಿ ಶ್ರೀ ಖಿವರಾಮ್ ರವರನ್ನು ಅಂದಿನ ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯ ಅಧಿಕಾರಿಗಳಾದ 1) ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೊಹಮದ್ ಮುಕಾರಾಮ್ (ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್ ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು), 2) ಶ್ರೀ ದೇವರಾಜ್, ಹೆಚ್.ಸಿ–4208, (ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಸಿ.ಸಿ.ಬಿ, ಚಾಮರಾಜಪೇಟೆ), 3) ಶ್ರೀ ಅನಿಲ್‌ಕುಮಾರ್ ಹೆಚ್.ಸಿ–8204, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆ, ಬೆಂಗಳೂರು, 4) ಶ್ರೀ ಗಂಗಹೊನ್ನಯ್ಯ, ಹೆಚ್.ಸಿ–4987, (ಹಾಲಿ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಜೆ.ಸಿ ನಗರ ಪೊಲೀಸ್ ಠಾಣೆ) ರವರುಗಳು ಅಕ್ರಮವಾಗಿ ಅವರ ವಶದಲ್ಲಿರಿಸಿಕೊಂಡು ಹಲ್ಲೆ ಮಾಡಿ ಕರ್ತವ್ಯ ದುರುಪಯೋಗ ಪಡಿಸಿಕೊಂಡಿರುವುದು ಕಂಡುಬಂದಿರುವುದರಿಂದ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ನಡೆಸುವಂತೆ ಕರ್ನಾಟಕ ಸರ್ಕಾರದ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2007 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ. 23–04–2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.